**O.S. 49-24 PW :1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 07.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ P K J ವಕೀಲರಿಂದಃ**

3. ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ಹಣ ಬಂದಿಲ್ಲ ಅಂತಾ ಮಾಡಿದ ದಾವೆ ಅಂದರೆ ಸರಿಯಲ್ಲ. ನಮಗೆ ಹಣ ಬಂದಿಲ್ಲ ಅಂತಾ ವಾದ ಪತ್ರದಲ್ಲಿ ಬರೆದಿದ್ದು ನಿಜ. ನಮಗೆ 3 ಕೋಟಿ 65 ಲಕ್ಷ ರೂ. ಬರಬೇಕಾಗಿತ್ತು. ನಾವು 3 ಕೋಟಿ 65 ಲಕ್ಷ ರೂ, ಬರಬೇಕು ಅಂತಾ ಈ ದಾವೆಯಲ್ಲಾಗಲಿ ಅಥವಾ ಬೇರೆ ದಾವೆಯಲ್ಲಾಗಲಿ ಪರಿಹಾರ ಕೇಳಿಲ್ಲ ಅಂದರೆ ಸರಿ. ನನ್ನ ಪ್ರಕಾರ ಈ ದಾವೆ ವಾಟ್ನಿ ದಾವೆ. ನಾವು ಈ ದಾವೆಯನ್ನು ಹಣದ ಮಾಗಣಿ ಬೇಡಿ ಈ ದಾವೆ ಸಲ್ಲಿಸಿಲ್ಲ. ವಾದ ಪತ್ರದಲ್ಲಿರುವ ಅಂಶಗಳ ಪ್ರಕಾರ ಹಣಕ್ಕೋಸ್ಕರ ಈ ದಾವೆ ಹಾಕಿದೆ ಅಂದರೆ ಸರಿಯಲ್ಲ.

4. ಶೆಡ್ಯೂಲ್ - ಎ ಕ್ರಮ ಸಂಖ್ಯೆ 1, ಸ ನಂಃ 59/2, 2 ಎಕರೆ 18 ಗುಂಟೆ ಅಜಯಕುಮಾರ ರವರ ಹೆಸರಿನಲ್ಲಿದೆ. ಅವರ ಮಕ್ಕಳ ಹೆಸರಿನಲ್ಲಿದೆ. ದಾವೆ ಸಲ್ಲಿಸುವ ಕಾಲದಲ್ಲಿ ಸ ನಂಃ 59/2, 2 ಎಕರೆ 18 ಗುಂಟೆ ಯಾರ ಹೆಸರಿನಲ್ಲಿದೆ ಎಂದು ನಾನು ನೋಡಲು ಹೋಗಿಲ್ಲ. ಈ ಜಮೀನು ಯಾವಾಗ ಹಾಗೂ ಎಷ್ಟು ಹಣಕ್ಕೆ ಖರೀದಿಯಾಗಿದೆ ಎಂದು ನಾನು ದಾವೆ ಹಾಕುವ ಕಾಲಕ್ಕೆ ನೋಡಿಲ್ಲ. ಈ ಜಮೀನನ್ನು ಯಾರು, ಯಾವಾಗ ಎಷ್ಟು ಹಣಕ್ಕೆ ಖರೀದಿ ಮಾಡಿದ್ದಾರೆಂದು ವಿವರಣೆ ವಾದ ಪತ್ರದಲ್ಲಿ ಬರೆದಿಲ್ಲ ಅಂದರೆ ಸರಿ.

5. ಸ ನಂಃ 59/3, 3 ಎಕರೆ 20 ಗುಂಟೆ ರೂಪಾ ರವರ ಹೆಸರಿನಲ್ಲಿದೆ, ಮುಂದುವರೆದು ಅಜಯಕುಮಾರ ಹಾಗೂ ರೂಪಾ ರವರ ಹೆಸರಿನಲ್ಲಿದೆ ಎಂದು. ದಾವೆ ಸಲ್ಲಿಸುವ ಕಾಲಕ್ಕೆ ಈ ಜಮೀನನ್ನು ಯಾರು, ಯಾವಾಗ ಎಷ್ಟು ಹಣಕ್ಕೆ ಖರೀದಿ ಮಾಡಿದ್ದಾರೆಂದು ವಿವರಣೆ ವಾದ ಪತ್ರದಲ್ಲಿ ಬರೆದಿಲ್ಲ ಅಂದರೆ ಸರಿ. ಸ ನಂಃ 45/5, ವಿಸ್ತೀರ್ಣ 10 ಎಕರೆ ಅಭಿಷೇಕ ರವರ ಹೆಸರಿನಲ್ಲಿದೆ. ಈ ಜಮೀನು ಯಾವಾಗ ಹಾಗೂ ಎಷ್ಟು ಹಣಕ್ಕೆ ಖರೀದಿಯಾಗಿದೆ ಎಂದು ನಾನು ದಾವೆ ಹಾಕುವ ಕಾಲಕ್ಕೆ ನೋಡಿಲ್ಲ. ಈ ಜಮೀನನ್ನು ಯಾರು, ಯಾವಾಗ ಎಷ್ಟು ಹಣಕ್ಕೆ ಖರೀದಿ ಮಾಡಿದ್ದಾರೆಂದು ವಿವರಣೆ ವಾದ ಪತ್ರದಲ್ಲಿ ಬರೆದಿಲ್ಲ ಅಂದರೆ ಸರಿ. ಶೆಡ್ಯೂಲ್ ಬಿ- ಆಸ್ತಿಯ ಸಿಟಿ ಎಸ್ ನಂಃ 1865/ಡಿ, ಕ್ಷೇತ್ರ 206.3/9 ಚದರ ಯಾರ್ಡ ಮತ್ತು ಸಿಟಿ ಎಸ್ ನಂಃ 185 ಸಿ ಕ್ಷೇತ್ರ 178.5/9 ಚದರ ಯಾರ್ಡ ಆಸ್ತಿಯನ್ನು ಈ ಆಸ್ತಿ ಯಾವಾಗ ಹಾಗೂ ಎಷ್ಟು ಹಣಕ್ಕೆ ಖರೀದಿಯಾಗಿದೆ ಎಂದು ನಾನು ದಾವೆ ಹಾಕುವ ಕಾಲಕ್ಕೆ ನೋಡಿಲ್ಲ.

ಈ ಆಸ್ತಿಯನ್ನು ಯಾರು, ಯಾವಾಗ ಎಷ್ಟು ಹಣಕ್ಕೆ ಖರೀದಿ ಮಾಡಿದ್ದಾರೆಂದು ವಿವರಣೆ ವಾದ ಪತ್ರದಲ್ಲಿ ಬರೆದಿಲ್ಲ ಅಂದರೆ ಸರಿ. ಮುಂದುವರೆದು ಅವಿನಾಶ ಹೆಸರಿನಲ್ಲಿ ಖರೀದಿಯಾಗಿದೆ ಎಂದು. ದಾವಾ ಆಸ್ತಿಗಳನ್ನು ಹೊರತುಪಡಿಸಿ ನನ್ನ ಹೆಸರಿನಲ್ಲಿ ಹಾಗೂ ಪ್ರತಿವಾದಿ ನಂಃ 1, 6 ರಿಂದ 8 ರವರ ಹೆಸರಿನಲ್ಲಿರುವ ಆಸ್ತಿಗಳನ್ನು ನಾವು ತೋರಿಸಿಲ್ಲ. ಭವಾನಿನಗರದಲ್ಲಿ ನಾವು ವಾಸಿಸುವ ಮನೆ ನನ್ನ, ಸಂದೀಪ ಹಾಗೂ ಸಾಗರ ರವರ ಹೆಸರಿನಲ್ಲಿ ಜಂಟಿಯಾಗಿದೆ. ಅದನ್ನು 2013-14 ರಲ್ಲಿ ಖರೀದಿಯಾಗಿದೆ. ಎಷ್ಟು ಹಣಕ್ಕೆ ಖರೀದಿಯಾಗಿದೆ ಎಂದು ಗೊತ್ತಿಲ್ಲ. ಮೊದಲು ಬಂದ ಪರಿಹಾರದ ಹಣದಿಂದ ಈ ಮನೆಯನ್ನು ಖರೀದಿಸಲಾಗಿದೆ. ಭವಾನಿನಗರದಲ್ಲಿ ಬಿಟ್ಟು ನನ್ನ, ಸಂದೀಪ ಹಾಗೂ ಸಾಗರ ರವರ ಹೆಸರಿನಲ್ಲಿ ಆಸ್ತಿ ಇಲ್ಲ. ಯುನಿಯನ್ ಬ್ಯಾಂಕದಲ್ಲಿ ಎಫ್ ಡಿ ಇತ್ತು ಅದನ್ನು ತೆಗೆದಿರುತ್ತೇವೆ. ಸದರಿ ಎಫ್ ಡಿ ಹಣ ಪರಿಹಾರದಿಂದ ಬಂದ ಹಣ ಅಂದರೆ ಸರಿ. ಎಫ್ ಡಿ ಹಣವನ್ನು ಯಾವಾಗ ತೆಗೆದುಕೊಂಡಿರುತ್ತೇನೆಂದು ನೆನಪಿಲ್ಲ. ನಮ್ಮ ಬಳಿ ಯುನಿಯನ್ ಬ್ಯಾಂಕಿನ ಪಾಸ್ ಬುಕ್ ಹಾಗೂ ಸ್ಟೇಟಮೆಂಟ ಇದೆ. ಪರಿಹಾರದ ಹಣವನ್ನು ಆದಾಯ ತೆರಿಗೆಯಲ್ಲಿ ಘೋಷಣೆ ಮಾಡಿರುತ್ತೇವೆ ಅಂದರೆ ಸರಿ. ಆ ದಾಖಲೆ ನಮ್ಮ ಬಳಿ ಇವೆ. ಎಫ್ ಡಿ ಹಣದ ಬಗ್ಗೆ ಹಾಗೂ ಆದಾಯ ತೆರಿಗೆ ಕಟ್ಟಿದ ಬಗ್ಗೆ ನಮ್ಮ ವಾದ ಪತ್ರದಲ್ಲಿ ಹೇಳಿಲ್ಲ ಅಂದರೆ ಸರಿ. ಭವಾನಿನಗರದಲ್ಲಿರುವ ಮನೆ ಬಗ್ಗೆ ಉಲ್ಲೇಖ ಮಾಡಿಲ್ಲ ಅಂದರೆ ಸರಿ.

6. ಅರವಿಂದ ಭರಮಪ್ಪ ಕುಟ್ಟಿ ಒಂದನೇ ಪ್ರತಿವಾದಿ ನಮ್ಮ ದೊಡ್ಡಪ್ಪ. ಒಂದನೇ ಪ್ರತಿವಾದಿ ಸಹ ಪರಿಹಾರದ ಹಣದಿಂದ ಆಸ್ತಿ ಖರೀದಿ ಮಾಡಿರುತ್ತಾರೆ ಅಂದರೆ ಸರಿ. ಅವರು ಎಲ್ಲೆಲ್ಲಿ ಎಷ್ಟು ಆಸ್ತಿ ಖರೀದಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ಅವರ ಹಾಗೂ ನಮ್ಮ ನಡುವೆ ಮಾತುಕತೆ ಇಲ್ಲ. ಪ್ರತಿವಾದಿ ನಂಃ 6 ರಿಂದ 8 ರವರು ಪರಿಹಾರದ ಹಣದಿಂದ ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ ಅಂದರೆ ಸರಿ. ಪ್ರತಿವಾದಿ 1, ಹಾಗೂ 6 ರಿಂದ 8 ರವರು ಖರೀದಿ ಮಾಡಿದ ಆಸ್ತಿಗಳನ್ನು ಈ ದಾವೆಯಲ್ಲಿ ತೋರಿಸಿಲ್ಲ.

7. ಎರಡನೇ ಪ್ರತಿವಾದಿ ಭೂ-ಸ್ವಾಧೀನ ಆದೇಶ ಪ್ರಶ್ನೆ ಮಾಡಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ ಪ್ರಕರಣಗಳನ್ನು ನೋಡಿಕೊಳ್ಳುತ್ತಿದ್ದರು. 2003 ರಿಂದ ನಿಖಾಲಿಯಾಗುವವರೆಗೂ ಎರಡನೇ ಪ್ರತಿವಾದಿ ಪ್ರಕರಣಗಳನ್ನು ನೋಡಿಕೊಳ್ಳುತ್ತಿದ್ದರು ಅಂದರೆ ಸರಿ. ಸದರಿ ಪ್ರಕರಣಗಳ ವಕೀಲರ ಖರ್ಚು ಹಾಗೂ ಇತರೆ ಖರ್ಚುಗಳನ್ನು ಎರಡನೇ ಪ್ರತಿವಾದಿ ಕೊಟ್ಟಿರುತ್ತಾರೆ ಅಂದರೆ ಸರಿ. ಅದರ ಬಗ್ಗೆ ಉಲ್ಲೇಖ ದಾವೆಯಲ್ಲಿ ಇಲ್ಲ ಅಂದರೆ ಸರಿ.

**O.S. 49-24** **PW :1**

8. ಪರಿಹಾರದ ಹಣ ಬಂದಾಗ ಎರಡನೇ ಪ್ರತಿವಾದಿ ನಮ್ಮ ಹಿಸ್ಸೆದ ಹಣ ಕೊಟ್ಟಾಗ ನಾವು ಆಸ್ತಿಗಳನ್ನು ಖರೀದಿ ಮಾಡಿರುತ್ತೇವೆ ಅಂದರೆ ಸರಿ. ಮುಂದುವರೆದು ಹಿಸ್ಸೆಗಳನ್ನು ಸರಿಯಾಗಿ ಕೊಟ್ಟಿಲ್ಲವೆಂದು. ನನ್ನ ಪ್ರಕಾರ ಎಷು್ಟ ಹಣ ಬಂದಿತ್ತು, ಎಷ್ಟು ಹಣ ಕೊಟ್ಟಿದ್ದಾರೆ, ಎಷ್ಟು ಹಣ ಬಾಕಿ ಇದೆ ಇದರ ಬಗ್ಗೆ ಹೊಂದಾಣಿಕೆ ಆಗುವುದು ಬಾಕಿ ಇದೆ ಅಂದರೆ ಸರಿ. (Settlement of account). ನ್ಯಾಯಾಲಯದ ಶುಲ್ಕವನ್ನು ತಪ್ಪಿಸಲು ಈ ದಾವೆ ಆಸ್ತಿ ಸಲುವಾಗಿ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಪ್ರಕಾರ 2018-19 ರಲ್ಲಿ ಕೊನೆಯ ಬಾರಿಗೆ ಸರಕಾರದಿಂದ ಪರಿಹಾರದ ಹಣ ಬಂದಿದೆ. 2018 ರಿಂದ ನಾನು ಪ್ರತಿವಾದಿಗಳಿಗೆ ದಾವೆ ಹಾಕುವ ಕಾಲದವರೆಗೂ ಹಣ ಕೇಳಿಲ್ಲ ಅಂದರೆ, ಸಾಕ್ಷಿಯೂ ಉತ್ತರಿಸುತ್ತಾರೆ, ನಮ್ಮ ಹಿಸ್ಸಾದ 2 ಕೋಟಿ 44 ಲಕ್ಷ ರೂ. ಕೊಟ್ಟರು, ಉಳಿದ ಹಣ ಜಂಟಿಯಾಗಿ ಆಸ್ತಿ ಖರೀದಿದಿ ಮಾಡೋಣ ಅಂತಾ ಹೇಳಿದರು ಎಂದು ಉತ್ತರಿಸುತ್ತಾರೆ. ಕೊನೆಯ ಬಾರಿಗೆ ಹಣ ಬಂದಾಗ ನಮ್ಮ ಪಾಲಿನ ಹಿಸ್ಸಾದ ಹಣವನ್ನು ಕೊಟ್ಟಬಿಡಿ ಅಂತಾ ನಾನು ಕೇಳಿಲ್ಲ. ಟಿ ಡಿ ಎಸ್ ಹಣ ಯಾವಾಗ ಬಂದಿದೆ ಎಂದು ದಿನಾಂಕ ನೆನಪಿಲ್ಲ. ದಾವೆಯಲ್ಲಿ ಬರೆದಿದ್ದು ಸರಿ ಇದೆ. ದಿಃ 19.06.2021 ರಂದು ಟಿ ಡಿ ಎಸ್ ಹಣ ಬಂದಾಗ ನಮ್ಮ ಪಾಲಿನ ಹಿಸ್ಸಾ ಕೊಡಿರಿ ಎಂದು ಕೇಳಿಲ್ಲ. ದಾವಾ ಆಸ್ತಿಗಳನ್ನು ಖರೀದಿ ಮಾಡುವ ಕಾಲಕ್ಕೆ ನಮ್ಮ ಹೆಸರನ್ನು ಜಂಟಿಯಾಗಿ ಸೇರಿಸಿರಿ ಅಂತಾ ಕೇಳಿರುತ್ತೇವೆ. ಅದರ ಬಗ್ಗೆ ನಾವು ನ್ಯಾಯಾಲಯದಲ್ಲಿ ಯಾವ ದಾಖಲೆಗಳನ್ನು ಹಾಜರಪಡಿಸಿಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿದ್ದೇವೆ. ನಮಗೆ ಬರಬೇಕಾದ ಹಿಸ್ಸಾದ ಹಣವನ್ನು ಪಡೆದು ನಾವು ತಪ್ಪು ದಾವೆಯನ್ನು ಸಲ್ಲಿಸಿದ್ದೇವೆ ಸರಿಯಲ್ಲ. ಹಾಜರಪಡಿಸಿದ ದಾಖಲಾತಿಗಳ ಅಪೂರ್ಣ ಹಾಗೂ ಅಸಂಬಂಧ ಇವೆ ಅಂದರೆ ಸರಿಯಲ್ಲ. ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.